**ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,**

**ಹಗರಿಬೊಮ್ಮನಹಳ್ಳಿ**

ಸಿ ಸಿ ನಂ. 820/2015

ಸಾಕ್ಷಿಗೆ ದಿನಾಂಕ 26-10-2024 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 4 P.W.: 4

| | | |
|---|---|---|
| ಹೆಸರು | : | ಕೆ ಎಂ ಜಗದೀಶ್ |
| ತಂದೆಯ ಹೆಸರು | : | ಗುರುಸ್ವಾಮಿ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಹಂಪಸಾಗರ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಸುಮಾರು 9 ವರ್ಷದ ಹಿಂದೆ ಹಂಪಸಾಗರ-2 ಬಸ್ ನಿಲ್ದಾಣದ ಬಳಿ ಪೋಲೀಸರ ಕೋರಿಕೆ ಮೇರೆಗೆ ಕೆಲ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ಎಷ್ಟು ದಾಖಲೆಗಳಿಗೆ ಸಹಿ ಮಾಡಿರುತ್ತೇನೆನ್ನುವುದು ನನಗೆ ನೆನಪಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ನ್ಯಾಯಾಲಯದ ಆದೇಶದಂತೆ ಮಾಲು ಬಿಡುಗಡೆ ಪಂಚನಾಮೆಯಾಗಿದ್ದು, ಸಾಕ್ಷಿಯು ಸದರಿ ದಾಖಲೆಯಲ್ಲಿ ತನ್ನ ಸಹಿ ಇದೆ ಅಂತಾ ನೋಡಿ ಗುರುತಿಸಿದ್ದು ಇರುತ್ತದೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ-12 ಅಂತಾ ಗುರುತಿಸಿದ್ದು ಇರುತ್ತದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-12 ಬಿ ಅಂತಾ ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಏನು ಬರೆದಿರುತ್ತಾರೆನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ದಿಃ 30-12-2014 ರ ಆರೋಪಿತರು ಕಳ್ಳತನ ಮಾಡಿದ ಮನೆಯಬಳಿ ಜರುಗಿಸಿದೆ ಅಂತಾ ಹೇಳಲಾದ ಪಂಚನಾಮೆಯಾಗಿದ್ದು, ಸಾಕ್ಷಿಯು ಸದರಿ ದಾಖಲೆಯಲ್ಲಿ ತನ್ನ ಸಹಿ ಇದೆ ಅಂತಾ ನೋಡಿ ಗುರುತಿಸಿದ್ದು ಇರುತ್ತದೆ. ಸದರಿ ದಾಖಲೆಯನ್ನು ನಿಪಿ-17 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-17 ಎ ಅಂತಾ ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ದಿಃ 30-12-2014 ರ ನಂದಿಪುರ ಗ್ರಾಮದ ಕ್ಯಾಸ್ ಬಳಿ ಜರುಗಿಸಿದೆ ಅಂತಾ ಹೇಳಲಾದ ಪಂಚನಾಮೆಯಾಗಿದ್ದು, ಸಾಕ್ಷಿಯು ಸದರಿ ದಾಖಲೆಯಲ್ಲಿ ತನ್ನ ಸಹಿ ಇದೆ ಅಂತಾ ನೋಡಿ ಗುರುತಿಸಿದ್ದು ಇರುತ್ತದೆ. ಸದರಿ ದಾಖಲೆಯನ್ನು ನಿಪಿ-18 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-18 ಎ ಅಂತಾ ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಏನು ಬರೆದಿರುತ್ತಾರೆನ್ನುವುದು ನನಗೆ ಗೊತ್ತಿಲ್ಲ. ನನಗೆ ಯಾವುದೇ ಆರೋಪಿತರನ್ನು ಪೋಲೀಸರು ತೋರಿಸಿಲ್ಲ, ನನ್ನ ಸಮ್ಮುಖದಲ್ಲಿ ಆರೋಪಿತರು

ಹಾಜರುಪಡಿಸಿದ ಯಾವುದೇ ವಸ್ತುಗಳನ್ನು ಪೋಲೀಸರು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಾನು ಆರೋಪಿತರನ್ನು ನೋಡಿಲ್ಲ, ಕಾರಣ ಗುರುತಿಸಲು ಸಾಧ್ಯವಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ22-01-2015 ರಂದು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಪೋಲೀಸ್ ವೃತ್ತ ಕಚೇರಿಯಲ್ಲಿ ನಿಪಿ-12 ರಂತೆ ಪಂಚನಾಮೆಯನ್ನು ಜರುಗಿಸಿದ್ದು ಇರುತ್ತದೆ, ಅದೇ ರೀತಿ ದಿಃ 30-12-2014 ರಂದು ನಿಪಿ17 ರಂತೆ ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಆರೋಪಿತರು ಕಳ್ಳತನ ಮಾಡಿದ ಮನೆಯ ಬಳಿ ಪಂಚನಾಮೆಯನ್ನು ಜರುಗಿಸಿದ್ದು ಇರುತ್ತದೆ, ಹಾಗೂ ಅದೇ ದಿನ ನಂದೀಪುರ ಗ್ರಾಮದ ಕ್ರಾಸ್ ಬಳಿ ನಿಪಿ-18 ರಂತೆ ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿದ್ದು ಇರುತ್ತದೆಂದರೆ ಸರಿಯಲ್ಲ. ಸದರಿ ಪಂಚನಾಮೆಗಳಲ್ಲಿ ಇರುವಂತಹ ವಿಚಾರಗಳನ್ನು ಸಂಪೂರ್ಣವಾಗಿ ತಿಳಿದುಕೊಂಡು ನಾನು ಪಂಚನಾಮೆಗಳನ್ನು ಜರುಗಿಸಿದ ಸ್ಥಳಗಳಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ನಿಪಿ-12 ರಂತೆ ಪೋಲೀಸರು ನನ್ನ ಸಮಕ್ಷಮ ಬಂಗಾರದ ವಸ್ತುಗಳನ್ನು ಚಾಸಾ-7 ರವರಿಗೆ ಹಸ್ತಾಂತರಿಸಿದ್ದು ಇರುತ್ತದೆ, ನಿಪಿ-17 ಮತ್ತು 18 ರಂತೆ ಪೋಲೀಸರು ನನ್ನ ಸಮಕ್ಷಮ ಬಂಗಾರದ ಒಡವೆ, ಸೀರೆ ಮತ್ತು ಕಬ್ಬಿಣದ ರಾಡನ್ನು ಅಮಾನತ್ತುಪಡಿಸಿಕೊಂಡಿದ್ದು ಇರುತ್ತದೆಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತಿತದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತಿತದ್ದೇನೆಂದರೆ ಸರಿಯಲ್ಲ. ಈ ದಿನ ನ್ಯಾಯಾಲಯದ ಮುಂದಿರುವ 1, 3 ನೇ ಆರೋಪಿತರನ್ನು ಹಾಗೂ 2 ಮತ್ತು 4 ನೇ ಆರೋಪಿತರನ್ನು ಪೋಲೀಸರು ನನಗೆ ತೋರಿಸಿರುತ್ತಾರೆ ಆದ್ದರಿಂದ ಅವರನ್ನು ನಾನು ಗುರುತಿಸಬಹುದಾಗಿದ್ದರೂ ಸಹಾ ನನಗೆ ಪೋಲೀಸರು ಆರೋಪಿತರನ್ನು ತೋರಿಸಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ